ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ.

## (ಜಿಲ್ಲಾ ನಗರಾಭಿವೃದ್ಧಿ ಕೋಶ)

**ಸಂಖ್ಯೆ:23959/ಡಿಸಿಕೆ/186/ಸಿಬ್ಬಂದಿ/2018** **ದಿನಾಂಕ: 16-02-2018**

## -: ಅಧಿಸೂಚನೆ :-

ಕೊಪ್ಪಳ ಜಿಲ್ಲೆಯ **9 ನಗರ ಸ್ಥಳೀಯ ಸಂಸ್ಥೆಗಳಲ್ಲಿ** ಖಾಲಿ ಇರುವ ಈ ಕೆಳಕಂಡ **"ಪೌರ ಕಾರ್ಮಿಕರ"** ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದ ನಗರಾಭಿವೃದ್ಧಿ ಕೋಶ, ಕೊಪ್ಪಳ ಅಥವಾ **ಆಯಾ ನಗರ ಸ್ಥಳೀಯ ಸಂಸ್ಥೆಗಳ ಕಛೇರಿಯಿಂದ** ಪಡೆಯಬಹುದು, ಭರ್ತಿ ಮಾಡಿದ ಅರ್ಜಿಯನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ, ಕೊಪ್ಪಳ ಜಿಲ್ಲೆ, ಕೊಪ್ಪಳದಲ್ಲಿ ದಿನಾಂಕ : **05-03-2018** ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು, ಅರ್ಜಿ ನಮೂನೆ, ಮೀಸಲಾತಿ ವಿವರ ಹಾಗೂ ಹೆಚ್ಚಿನ ಮಾಹಿತಿಯನ್ನು ಆಯಾ ನಗರ ಸ್ಥಳೀಯ ಸಂಸ್ಥೆ ವೆಬ್‌ಸೈಟ್ ಅಥವಾ www.koppaldudc.mrc.gov.in or www.koppal.nic.in ಸಂಪರ್ಕಿಸಬಹುದು.

ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **05-03-2018** ಸಾಯಂಕಾಲ 05.30 ಗಂಟೆಯವರೆಗೆ

**ಪೌರಕಾರ್ಮಿಕರ ಹುದ್ದೆ ವೇತನ ಶ್ರೇಣಿ** ರೂ: 9600-200-12000-250-13000-300-14200-350-14550

| ನಗರ ಸ್ಥಳೀಯ ಸಂಸ್ಥೆಯ ಹೆಸರು | ಭರ್ತಿ ಮಾಡಬೇಕಾದ ಪೌರಕಾರ್ಮಿಕರ ಹುದ್ದೆಗಳ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ/ಅರ್ಹತೆಗಳು | ಹೆಚ್ಚಿನ ಮಾಹಿತಿಗೆ ವಿವರವಾದ ಅಧಿಸೂಚನೆಗೆ ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ |
|---|---|---|---|
| ನಗರಸಭೆ ಕೊಪ್ಪಳ | 27 | (1) ವಿದ್ಯಾರ್ಹತೆ ಅನ್ವಯಿಸುವುದಿಲ್ಲ<br>(2) ಕನ್ನಡ ಮಾತನಾಡಲು ಗೊತ್ತಿರಬೇಕು<br>(3) ಅರ್ಜಿಸಲ್ಲಿಸುವ ಅಭ್ಯಾರ್ಥಿಗಳು **ಆಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ** ಹಾಲಿ ಪೌರಕಾರ್ಮಿಕರಾಗಿ ಕ್ಷೇಮಾಭಿವೃದ್ಧಿ/ ದಿನಗೂಲಿ/ ಗುತ್ತಿಗೆ /ಹೊರಗುತ್ತಿಗೆ/ ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಇತರೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವವರು ಮಾತ್ರ ಅರ್ಜಿ ಸಲ್ಲಿಸಬಹುದು. | www.koppalcity.mrc.gov.in |
| ನಗರಸಭೆ ಗಂಗಾವತಿ | 26 | | www.gangavathicity.mrc.gov.in |
| ಪುರಸಭೆ ಕುಷ್ಟಗಿ | 29 | | www.kustagitown.mrc.gov.in |
| ಪುರಸಭೆ ಕಾರಟಗಿ | 46 | | www.karatagitown.mrc.gov.in |
| ಪಟ್ಟಣ ಪಂಚಾಯತ ಯಲಬುರ್ಗಾ | 18 | | www.yelburgatown.mrc.gov.in |
| ಪಟ್ಟಣ ಪಂಚಾಯತ ಕುಕನೂರ | 25 | | www.kukanurtown.mrc.gov.in |
| ಪಟ್ಟಣ ಪಂಚಾಯತ ಭಾಗ್ಯನಗರ | 29 | | www.bhagyanagartown.mrc.gov.in |
| ಪಟ್ಟಣ ಪಂಚಾಯತ ಕನಕಗಿರಿ | 23 | | www.kanakagiritown.mrc.gov.in |
| ಪಟ್ಟಣ ಪಂಚಾಯತ ತಾವರಗೇರ | 23 | | www.tavarageratown.mrc.gov.in |

ಈ ನೇಮಕಾತಿಯು ಸರ್ಕಾರದ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸಿರುವ/ಹೊರಡಿಸುವ ಆದೇಶ/ಸುತ್ತೋಲೆಗಳ

## ನಗರಸಭೆ ಕೊಪ್ಪಳ.

❖ **ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 27**

| ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| **4** | **14** | **1** | **4** | **1** | **1** | **1** | **1** | **27** |

## ಕೊಪ್ಪಳ ನಗರಸಭೆಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 1 | 1 | 1 | 0 | 0 | 0 | 4 |
| 2 | ಸಾಮಾನ್ಯ | 2 | 5 | 4 | 1 | 1 | 1 | 0 | 14 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 1 | 0 | 0 | 0 | 4 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 07 | 06 | 03 | 01 | 01 | 0 | 27 |

## ನಗರಸಭೆ ಗಂಗಾವತಿ

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : **26**

| ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 4 | 13 | 1 | 4 | 1 | 1 | 1 | 1 | 26 |

## ಗಂಗಾವತಿ ನಗರಸಭೆಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 1 | 1 | 1 | 0 | 0 | 0 | 4 |
| 2 | ಸಾಮಾನ್ಯ | 2 | 5 | 4 | 1 | 1 | 0 | 0 | 13 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 1 | 0 | 0 | 0 | 4 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 07 | 06 | 03 | 01 | 0 | 0 | 26 |

## ಕುಷ್ಟಗಿ ಪುರಸಭೆ

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 29

| ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 5 | 15 | 1 | 4 | 1 | 1 | 1 | 1 | 29 |

### ಕುಷ್ಟಗಿ ಪುರಸಭೆಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 2 | 1 | 1 | 0 | 0 | 0 | 5 |
| 2 | ಸಾಮಾನ್ಯ | 2 | 6 | 4 | 1 | 1 | 1 | 0 | 15 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 1 | 0 | 0 | 0 | 4 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 09 | 06 | 03 | 01 | 01 | 0 | 29 |

## ಕಾರಟಗಿ ಪುರಸಭೆ

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 46

| ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 7 | 23 | 2 | 7 | 2 | 2 | 2 | 1 | 46 |

### ಕಾರಟಗಿ ಪುರಸಭೆಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 2 | 2 | 2 | 1 | 0 | 0 | 0 | 7 |
| 2 | ಸಾಮಾನ್ಯ | 4 | 8 | 6 | 1 | 2 | 1 | 1 | 23 |
| 3 | ಪ್ರವರ್ಗ – I | 1 | 1 | 0 | 0 | 0 | 0 | 0 | 2 |
| 4 | ಪ್ರವರ್ಗ – II A | 2 | 2 | 2 | 1 | 0 | 0 | 0 | 7 |
| 5 | ಪ್ರವರ್ಗ – II B | 1 | 1 | 0 | 0 | 0 | 0 | 0 | 2 |
| 6 | ಪ್ರವರ್ಗ – III A | 1 | 1 | 0 | 0 | 0 | 0 | 0 | 2 |
| 7 | ಪ್ರವರ್ಗ – III B | 1 | 1 | 0 | 0 | 0 | 0 | 0 | 2 |
| | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 13 | 16 | 10 | 03 | 02 | 01 | 01 | 46 |

## ಯಲಬುರ್ಗಾ ಪಟ್ಟಣ ಪಂಚಾಯತ್

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 18

| ❖ ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 2 | 9 | 1 | 2 | 1 | 1 | 1 | 1 | 18 |

### ಯಲಬುರ್ಗಾ ಪಟ್ಟಣ ಪಂಚಾಯತಿಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 1 | 0 | 0 | 0 | 0 | 0 | 2 |
| 2 | ಸಾಮಾನ್ಯ | 2 | 3 | 3 | 1 | 0 | 0 | 0 | 9 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 0 | 0 | 0 | 0 | 0 | 2 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 05 | 03 | 01 | 00 | 00 | 0 | 18 |

## ಕುಕನೂರ ಪಟ್ಟಣ ಪಂಚಾಯತ್

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 25

| ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 4 | 13 | 1 | 3 | 1 | 1 | 1 | 1 | 25 |

### ಕುಕನೂರ ಪಟ್ಟಣ ಪಂಚಾಯತಿಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 1 | 1 | 1 | 0 | 0 | 0 | 4 |
| 2 | ಸಾಮಾನ್ಯ | 2 | 5 | 4 | 1 | 1 | 0 | 0 | 13 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 0 | 0 | 0 | 0 | 3 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| 8 | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 07 | 06 | 02 | 01 | 00 | 0 | 25 |

## ಭಾಗ್ಯನಗರ ಪಟ್ಟಣ ಪಂಚಾಯತ್

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 29

| ಪ.ಜಾ. | ಸಾಮಾನ್ಯ | ಪ್ರವರ್ಗ – I | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 5 | 15 | 1 | 4 | 1 | 1 | 1 | 1 | 29 |

### ಭಾಗ್ಯನಗರ ಪಟ್ಟಣ ಪಂಚಾಯತಿಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 2 | 1 | 1 | 0 | 0 | 0 | 5 |
| 2 | ಸಾಮಾನ್ಯ | 2 | 6 | 4 | 1 | 1 | 1 | 0 | 15 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 1 | 0 | 0 | 0 | 4 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| 8 | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 09 | 06 | 03 | 01 | 01 | 00 | 29 |

## ಕನಕಗಿರಿ ಪಟ್ಟಣ ಪಂಚಾಯತ್

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 23

| ❖ ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 3 | 12 | 1 | 3 | 1 | 1 | 1 | 1 | 23 |

### ಕನಕಗಿರಿ ಪಟ್ಟಣ ಪಂಚಾಯತಿಯಲ್ಲಿರುವ ಹುದ್ದೆಗಳ ವಿವರ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 1 | 1 | 0 | 0 | 0 | 0 | 3 |
| 2 | ಸಾಮಾನ್ಯ | 2 | 5 | 3 | 1 | 1 | 0 | 0 | 12 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 0 | 0 | 0 | 0 | 3 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| 8 | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 07 | 05 | 01 | 01 | 0 | 0 | 23 |

## ತಾವರಗೇರಾ ಪಟ್ಟಣ ಪಂಚಾಯತ್

❖ ಮೀಸಲಾತಿಯನ್ವಯ ಖಾಲಿ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ : 23

| ❖ ಪ.ಜಾ. | ಸಾಮಾನ್ಯ | ಪ್ರ.ವ. | ಪ್ರ.ವ. 2ಎ | ಪ್ರ.ವ. 2ಬಿ | ಪ್ರ.ವ. 3ಎ | ಪ್ರ.ವ. 3ಬಿ | ಪ್ರ.ಪಂ. | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 3 | 12 | 1 | 3 | 1 | 1 | 1 | 1 | 23 |

**ತಾವರಗೇರಾ ಪಟ್ಟಣ ಪಂಚಾಯತಿಯಲ್ಲಿರುವ ಹುದ್ದೆಗಳ ವಿವರ**

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಪ.ಜಾ | 1 | 1 | 1 | 0 | 0 | 0 | 0 | 3 |
| 2 | ಸಾಮಾನ್ಯ | 2 | 5 | 3 | 1 | 1 | 0 | 0 | 12 |
| 3 | ಪ್ರವರ್ಗ – I | 1 | 0 | 0 | 0 | 0 | 0 | 0 | 1 |
| 4 | ಪ್ರವರ್ಗ – II A | 1 | 1 | 1 | 0 | 0 | 0 | 0 | 3 |
| 5 | ಪ್ರವರ್ಗ – II B | 1 | 0 | 0 | 0 | 0 | 0 | 0 | 1 |
| 6 | ಪ್ರವರ್ಗ – III A | 1 | 0 | 0 | 0 | 0 | 0 | 0 | 1 |
| 7 | ಪ್ರವರ್ಗ – III B | 1 | 0 | 0 | 0 | 0 | 0 | 0 | 1 |
| 8 | ಪ. ಪಂ | 1 | 0 | 0 | 0 | 0 | 0 | 0 | 1 |
| | ಒಟ್ಟು | 09 | 07 | 05 | 01 | 01 | 00 | 0 | 23 |

**ನೇಮಕಾತಿ ವಿಧಾನ** : ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿನ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2017ರ ಪ್ರಕಾರ ಅಭ್ಯರ್ಥಿಗಳ ಆಯ್ಕೆಯನ್ನು ಮಾಡಲಾಗುವುದು.

(1) ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಆಯಾ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯನ್ನೆ ಹೊಂದಿರತಕ್ಕದ್ದು ಬೇರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರತ ಅಭ್ಯರ್ಥಿಗಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

(2) ಅರ್ಜಿಸಲ್ಲಿಸುವ ಅಭ್ಯರ್ಥಿಗಳು **ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಲ್ಲಿ** ಪೌರಕಾರ್ಮಿಕರಾಗಿ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ /ಹೊರಗುತ್ತಿಗೆ ಮತ್ತು ಇತರೆ ಆಧಾರದ ಮೇಲೆ ನೇಮಕಾತಿ ಹೊಂದಿ ಕನಿಷ್ಠ 2 ವರ್ಷ ಸೇವೆಯನ್ನು ಸಲ್ಲಿಸಿರಬೇಕು ಮತ್ತು ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯ ನಿರ್ವಹಿಸುತ್ತಿರಬೇಕು.

(3) ಕ್ಷೇಮಾಭಿವೃದ್ಧಿ ಅಂದರೆ, ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ರೀತ್ಯಾ, ರಾಜ್ಯದ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರು.

(4) ವಯೋಮಿತಿ ಕನಿಷ್ಠ 18 ವರ್ಷಗಳಿಂದ ಗರಿಷ್ಟ ವಯೋಮಿತಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಅಥವಾ ಕರ್ನಾಟಕ ಪುರಸಭೆ (ಅಧಿಕಾರಿ / ನೌಕರರ ನೇಮಕಾತಿ) ನಿಯಮಗಳು 2010 ರಲ್ಲಿ ಏನೆ ಹೇಳಿದ್ದರೂ ಗರಿಷ್ಠ ವಯೋಮಿತಿ ಅಧಿಸೂಚಿಸುವ ದಿನಾಂಕದಂದು 45 ವರ್ಷ ಮೀರಿರಬಾರದು.

(5) ಅಭ್ಯರ್ಥಿಯ ವಯಸ್ಸನ್ನು ಶೈಕ್ಷಣಿಕ / ವಿದ್ಯಾರ್ಹತೆ ದಾಖಲಾತಿಗಳು / ಆಧಾರ್ ಕಾರ್ಡ / ಪಡಿತರ ಚೀಟಿ / ಮತದಾರರ ಗುರುತಿನ ಚೀಟಿ ದಾಖಲಾತಿಗಳನ್ನು ಆಧರಿಸಿ ನಿರ್ಧರಿಸಲಾಗುವುದು.

(6) ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ಪುರಸಭೆಗಳಲ್ಲಿ ಹಾಲಿ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ / ಇತರೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಆದ್ಯತೆ ನೀಡಲಾಗುವುದು

(7) ಕಡಿಮೆ ವರ್ಷ ಸೇವೆ ಸಲ್ಲಿಸಿರುವವರಿಗಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೆ ಪ್ರಥಮ ಆದ್ಯತೆ ನೀಡಲಾಗುವುದು.

(8) ನೇಮಕಾತಿಯಲ್ಲಿನ ಆದ್ಯತೆಯನ್ನು ಕ್ಷೇಮಾಭಿವೃದ್ಧಿ /ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ/ ಇತರೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಕ್ರಮವಾಗಿ ಪರಿಗಣಿಸಲಾಗುವುದು.

(9) ಹೊರಗುತ್ತಿಗೆ ಪೌರ ಕಾರ್ಮಿಕರಿಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್), ಹಾಜರಾತಿ ಮತ್ತು ವೇತನ ಪಡೆದ 2 ವರ್ಷಗಳ ದಾಖಲಾತಿಗಳನ್ನು ಪರಿಗಣಿಸಲಾಗುವುದು.

(10)ಕ್ಷೇಮಾಭಿವೃದ್ಧಿ / ದಿನಗೂಲಿ / ಸಮಾನ ಕೆಲಸಕ್ಕೆ ಸಮಾನ ವೇತನ / ಗುತ್ತಿಗೆ / ಇತರೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ 2 ವರ್ಷಗಳ ಮೇಲ್ಪಟ್ಟು ನಗರ ಸ್ಥಳೀಯ ಸಂಸ್ಥೆಗಳಿಂದ ವೇತನ ಪಡೆದ ದಾಖಲಾತಿಗಳನ್ನು ನೇಮಕಾತಿಯಲ್ಲಿ ಆಧ್ಯತೆಗೆ ಪರಿಗಣಿಸಲಾಗುವುದು.

(11) ಎರಡು ಮತ್ತು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಆಯ್ಕೆ ಮಾಡಲಾಗುವುದು.

(12)ನೇಮಕಾತಿ ಪ್ರಾಧಿಕಾರಿಯು ಆಯ್ಕೆ ಉಪನಿಯಮ (2) ರೀತ್ಯಾ ಮುಖ್ಯಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳಿಗೆ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು. ಉಪನಿಯಮ (2) ರಂತೆ ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಲ ಮತ್ತು ಲಂಬವಾದ) ಗೆ ಅನುಗುಣವಾಗಿ ಆಯ್ಕೆಯಾಗಬಹುದಾದ ಅಭ್ಯರ್ಥಿಗಳ ಶೇಕಡ 20 % ರಷ್ಟಿರಬೇಕು. ಉಪನಿಯಮ (2) ರಲ್ಲಿರುವಂಥೆ ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗುವುದು.

(13)ಉಪ ನಿಯಮ (2) ರಂತೆ ಆಯ್ಕೆಯಾದ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸದರಿ ಅಭ್ಯರ್ಥಿಯ ಬದಲಾಗಿ, ಅದೇ ಪ್ರವರ್ಗದ ಮೀಸಲಾತಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಅಭ್ಯರ್ಥಿಯಾಗಿರುವ ಮತ್ತೊಬ್ಬ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.

(14)ಉಪನಿಯಮ (2) ಮತ್ತು (5) ರಂತೆ ತಯಾರಿಸಲಾದ ಆಯ್ಕೆ ಪಟ್ಟಿಯನ್ನು ಸಂಬಂಧಿತ ನಗರಸಭೆ /ಪುರಸಭೆ/ ಪ.ಪಂ.ಗಳಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ತಿಳಿಸಿ ಮತ್ತು ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ವೆಬ್‌ಸೈಟಿನಲ್ಲಿ ಪ್ರಚುರಪಡಿಸಲಾಗುವುದು.

(15)ನೇಮಕಾತಿ ಪ್ರಾಧಿಕಾರಿಯು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯು ಗುರುತಿಸಲಾದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಆಯ್ಕೆ ಪಟ್ಟಿಯು ಪ್ರಕಟವಾದ ಒಂದು ವರ್ಷದ ಅವಧಿಯವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.

(16) ಅಭ್ಯರ್ಥಿಗಳ ನೇಮಕಾತಿಯನ್ನು ನಿಯಮ 4ರ ರೀತ್ಯಾ ಆಯ್ಕೆ ಪಟ್ಟಿಯಲ್ಲಿ ನಮೂದಿಸಲಾದ ಅಭ್ಯರ್ಥಿಗಳ ಹೆಸರು, ಅವರ ಹೆಸರಿನ ಮುಂದೆ ತೋರಿಸಲಾದ ಖಾಲಿ ಹುದ್ದೆಗಳಿಗನುಸಾರ ಎಲ್ಲಾ ರೀತಿಯಿಂದ ನೇಮಕಾತಿಗೆ ಅರ್ಹರಾಗಿದ್ದಾರೆ ಎಂಬುದನ್ನು ವಿಚಾರಣೆಯ ಮೂಲಕ ಖಚಿತಪಡಿಸಿಕೊಂಡು ನೇಮಕಾತಿ ಆದೇಶ ನೀಡಲಾಗುವುದು.

(17)ನಿಯಮ 4ರ ಉಪನಿಯಮ 6ರಲ್ಲಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಮಾತ್ರಕ್ಕೆ ಅವರ ನೇಮಕಾತಿ ಹಕ್ಕು ಎಂದು ಪರಿಭಾವಿಸತಕ್ಕದ್ದಲ್ಲ.

**(18) ಆಯ್ಕೆಯಾಗುವ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಕರೆದಾಗ ಜಿಲ್ಲಾಧಿಕಾರಿಗಳ ಕಛೇರಿ ಕೊಪ್ಪಳ ಇಲ್ಲಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.**

- **ಅರ್ಜಿ ಸಲ್ಲಿಸುವ ವಿಧಾನ :**

ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಈ ಕಾರ್ಯಾಲಯದಿಂದ ಹಾಗೂ ಸಂಬಂಧಿಸಿದ ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿಗಳಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅದರ ಮೇಲೆ ಸಹಿ/ಹೆಬೆಟ್ಟಿನ ಗುರುತು ಮಾಡುವುದು ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ/ಹೆಬ್ಬೆಟ್ಟಿನ ಗುರುತು ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಅಧಿಕೃತ ಅಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಆಯಾ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು **ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ** ದಿನಾಂಕ : **05–03–2018** ರೊಳಗಾಗಿ ತಲುಪುವಂತೆ ಕಳುಹಿಸುವುದು. ಅರ್ಜಿಯನ್ನು ಕಳುಹಿಸುವ ಲಕೋಟೆಯ ಮೇಲೆ ಅಭ್ಯರ್ಥಿಯು ತಾವು ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ತಪ್ಪದೇ ನಮೂದಿಸುವುದು. ಸಮಯ ಮೀರಿ ಬಂದ ಹಾಗು ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

- **ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು :**

1. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ. (ಒಟ್ಟು 3)
2. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ವರ್ಗಾವಣೆ ಪ್ರಮಾಣ ಪತ್ರ / ಜನನ ಪ್ರಮಾಣ ಪತ್ರ/ಆಧಾರದ ಕಾರ್ಡ/ಚುನಾವಣೆ ಗುರುತಿನ ಚೀಟಿ.
3. ಪ.ಜಾ/ಪ.ಪಂ. ಮತ್ತು ಪ್ರವರ್ಗವಾರುಗಳಿಗೆ ಸೇರಿದ ಅಭ್ಯರ್ಥಿಗಳು ಅನ್ವಯವಾಗುವ ನಮೂನೆಗಳಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಸತಕ್ಕದ್ದು.
4. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರದ ಆದೇಶದನುಸಾರ ನಮೂನೆ 2 ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು, ಅದನ್ನು ಪೌರಾಯುಕ್ತರು/

ಮುಖ್ಯಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. ಗ್ರಾಮೀಣ ಮೀಸಲಾತಿ ಕೋರುವ ಪ.ಜಾ/ಪ.ಪಂ. ಹಾಗು ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

5. ಅಂಗವಿಕಲ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರದ ಆದೇಶದ ಪ್ರಕಾರ ನಿಗದಿಪಡಿಸುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.
6. ಯೋಜನಾ ನಿರಾಶ್ರಿತರ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರದ ಆದೇಶದನುಸಾರ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಪ್ರ.ಪತ್ರ ಪಡೆದು ಸಲ್ಲಿಸತಕ್ಕದ್ದು.
7. ಮಾಜಿ ಸೈನಿಕ ಮೀಸಲಾತಿ ಕೋರುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ /ವಿಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸುವುದು.
8. ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ಪುರಸಭೆಗಳಲ್ಲಿ ಹಾಲಿ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ / ಇತರೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ದಾಖಲೆ ಸಲ್ಲಿಸುವುದು.
9. ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಂದ ಪಡೆದ ಸೇವಾ ಪ್ರಮಾಣ ಪತ್ರದ ದಾಖಲೆ ಸಲ್ಲಿಸುವುದು.
10. ಕಡಿಮೆ ವರ್ಷ ಸೇವೆ ಸಲ್ಲಿಸಿರುವವರಿಗಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ನೇಮಕಾತಿಯಲ್ಲಿನ ಆದ್ಯತೆ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ ಇತರೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರು ಸ್ಥಳೀಯ ಸಂಸ್ಥೆಯಿಂದ ಪಡೆದ ಸೇವಾ ಪ್ರಮಾಣ ಪತ್ರದ ದಾಖಲೆ ಲಗತ್ತಿಸುವುದು.
11. ಹೊರಗುತ್ತಿಗೆ ಪೌರ ಕಾರ್ಮಿಕರಿಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್), ಹಾಜರಾತಿ ಮತ್ತು ವೇತನ ಪಡೆದ 2 ವರ್ಷಗಳ ದಾಖಲಾತಿಗಳನ್ನು ಪೌರಯುಕ್ತರು/ಮುಖ್ಯಾಧಿಕಾರಿಗಳಿಂದ ಪಡೆದು, ಲಗತ್ತಿಸುವುದು. ಹಾಗೂ ಸೇವಾ ಪ್ರಮಾಣ ಪತ್ರದ ದಾಖಲೆ ಲಗತ್ತಿಸುವುದು.

- **ವಿಶೇಷ ಸೂಚನೆಗಳು :–**

- ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದು ಲಗತ್ತಿಸಿರಬೇಕು ಮತ್ತು ಕಡ್ಡಾಯವಾಗಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಯಿಂದ ದೃಢೀಕರಿಸಿರಬೇಕು.

- ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಯ ಖಾಯಂ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಬೇಕು. ಒಂದು ವೇಳೆ ಅಭ್ಯರ್ಥಿಯ ವಿಳಾಸ ಬದಲಾವಣೆಯಾದಲ್ಲಿ ತಕ್ಷಣವೇ ಈ ಕಚೇರಿಗೆ ಮಾಹಿತಿ ತಿಳಿಸಬೇಕು. ತಪ್ಪಿದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರು.
- ಅಭ್ಯರ್ಥಿಗಳು ಈ ನೇಮಕಾತಿ ಪ್ರಾಧಿಕಾರ (ಜಿಲ್ಲಾಧಿಕಾರಿಗಳು ಕೊಪ್ಪಳ) ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಅರ್ಜಿಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಈ ಅಧಿಸೂಚನೆಯು ಚಾಲ್ತಿಯಲ್ಲಿರುವ ಮತ್ತು ಕಾಲ–ಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಆದೇಶಗಳಿಗೆ ಒಳಪಟ್ಟಿರುತ್ತದೆ.
- ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ದಿನಾಂಕವು ಸಾರ್ವಜನಿಕ ರಜೆಯಾಗಿದ್ದರೆ ಮುಂದಿನ ಕಚೇರಿ ಕೆಲಸದ ದಿನ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ಎಂದು ತಿಳಿಯುವುದು.

ಈ ಮೇಲಿನ ಸೂಚನೆಗಳಿಗೆ ಅನುಸಾರವಾಗಿ ದಾಖಲೆಗಳನ್ನು ಒದಗಿಸಲು ತಪ್ಪಿದಲ್ಲಿ ಅಂತಹ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಅಭ್ಯರ್ಥಿಯು ನಕಲಿ ಅಭ್ಯರ್ಥಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜ ಅಥವಾ ತಿದ್ದುಪಡಿ ಮಾಡಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತಾವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗೆ ನಡೆಸಲಾದ ಪರಿಶೀಲನೆ ಪ್ರಕ್ರಿಯೆಗಳ ಸಂದರ್ಭಗಳಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಭಿಸಿರುವನೆಂದು ಕಂಡು ಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೇ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/–

**ಅಧ್ಯಕ್ಷರು,**
**ಪೌರಕಾರ್ಮಿಕರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ**
**ಹಾಗೂ ಜಿಲ್ಲಾಧಿಕಾರಿಗಳು ಕೊಪ್ಪಳ.**
**ಜಿಲ್ಲೆ ಕೊಪ್ಪಳ.**

ಸ್ಥಳ: ಕೊಪ್ಪಳ

ದಿನಾಂಕ: ________________